ಸರಿಯಾಗಿಲ್ಲ, ಹೀಗೆ ಮಾಡಿದ್ದನ್ನು ತತ್‌ಕ್ಷಣ ವಿಥ್‌ಡ್ರಾ ಮಾಡಿಕೊಳ್ಳಬೇಕು, ಇದು ಇಲ್‌ಲೀಗಲ್ ಆಗಿರುವುದನ್ನು ರೆಸ್ಪೋರ್ ಮಾಡುತ್ತೇನೆ ಅಂದರೆ ನನ್ನ ಅಡಿ ಇಲ್ಲ. ಈಗ ಮಾನ್ಯ ಮುಖ್ಯಮಂತ್ರಿಯವರೂ ಇದ್ದಾರೆ, ಸಂಬಂಧಪಟ್ಟ ಸಚಿವರು ಇಲ್ಲ. ಇದು ಡಿಪಾರ್ಟ್‌ಮೆಂಟ್ ರೆಕಮೆಂಡ್ ಮಾಡದೆ ಮತ್ತು ಅರ್ಹತೆ ಇಲ್ಲದೆ ಅವನಿಗೆ ಅಪಾಯಿಂಟ್‌ಮೆಂಟ್ ಮಾಡಿದ್ದಾರೆ, ಇದನ್ನು ನಾವು ಸರಿಪಡಿಸುತ್ತೇವೆ ಅಂದರೆ ನನ್ನದೇನೂ ಅಬ್‌ಜಕ್ಷನ್ ಇಲ್ಲ. ಹೋಮಿ ಇರಾನಿಯವರು ಈ ಸಂಸ್ಥೆಯಲ್ಲಿ ಕಮಾಂಡೆಂಟ್ ಆಗಿ ಒಳ್ಳೆಯ ಕೆಲಸವನ್ನು ಮಾಡಿಕೊಂಡು ಬಂದಿದ್ದಾರೆ. ಎಲ್ಲಾ ಸರಕಾರದವರು ಕೂಡ ಇವರ ಸೇವೆಯನ್ನು ನೋಡಿ ಮುಂದುವರೆಸಿಕೊಂಡು ಬಂದಿದ್ದಾರೆ. ಈಗ ದೇವರಗುಡ್ಡ ಎನ್ನುವಂಥ ಒಬ್ಬ ಗ್ರಾ ಜುಯೇಟ್ ಕೂಡ ಅಲ್ಲದ, ಅರ್ಹತೆಯೂ ಇಲ್ಲದ, ವ್ಯಕ್ತಿಯನ್ನು ಹೋಮಿ ಇರಾನಿ ಯವರ ಜಾಗದಲ್ಲಿ ನೇಮಕ ಮಾಡಿ ಮಂತ್ರಿಯವರು ಆರ್ಡರ್ ಕಳುಹಿಸಿದ್ದಾರೆ. ಜಾಯಿನ್ ಆಗು ಆ ಮೇಲೆ ನೋಡೋಣ ಎಂದು ಹೇಳಿದ್ದಾರೆ. ಈ ಖಾತೆಯು ಮಾನ್ಯ ಸಚಿವರಾದ ಸೋಮಣ್ಣನವರಿಗೆ ಬರುತ್ತದೆ. ಮುಖ್ಯಮಂತ್ರಿಯವರು ಈಗ ವಿಷಯ ಕೇಳಿದ್ದಕ್ಕೆ ಪುನಃ ವಿವರಿಸಿದ್ದೇನೆ.

ಶ್ರೀ ಜೆ.ಹೆಚ್. ಪಟೇಲ್:– ಮಾನ್ಯ ವಿರೋಧ ಪಕ್ಷದ ನಾಯಕರು ಹೇಳಿದ ಪ್ರಕಾರ ಅಲ್ಲಿ ತಪ್ಪಾಗಿದ್ದರೆ ಅದನ್ನು ನಾನು ಸರಿಪಡಿಸುತ್ತೇನೆ.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ:– ಏಕೆಂದರೆ ಅಲ್ಲಿನ ಹೋಂಗಾರ್ಡ್ ನವರು ಹೋಳಿ ಹುಣ್ಣಿಮೆಯ ಈ ಸಂದರ್ಭದಲ್ಲಿ ಸ್ಟ್ರೈಕ್ ಮೇಲೆ ಹೋಗುತ್ತಿದ್ದಾರೆ.

ಅಧ್ಯಕ್ಷರು:– ಹಾಗೆ ಸ್ಟ್ರೈಕ್ ಮಾಡುವುದು ಬೇಡ. ನೀವು ಅವರಿಗೆ ಸ್ಟ್ರೈಕ್ ಮಾಡದ ಹಾಗೆ ಅಪೀಲ್ ಮಾಡಿಕೊಳ್ಳಿ. ವಿಥ್‌ಡ್ರಾ ಮಾಡಿಕೊಳ್ಳಲು ಹೇಳಿ. ಮುಖ್ಯಮಂತ್ರಿಯವರು ಕಾಗದಪತ್ರಗಳನ್ನು ತರಿಸಿ ನೋಡಲಿ....

ಶ್ರೀ ಜೆ.ಹೆಚ್. ಪಟೇಲ್:– ಕಾಗದ ಪತ್ರಗಳನ್ನು ತರಿಸಿ ಸರಿಪಡಿಸುತ್ತೇವೆ.

(ಊ) ಬೆಂಗಳೂರು ಮಹಾನಗರ ಪಾಲಿಕೆಯಿಂದ ಅಭಿವೃದ್ಧಿ ಶುಲ್ಕ ಪಾವತಿ.

+ಶ್ರೀ ಎಸ್. ಸುರೇಶ್ ಕುಮಾರ್ (ರಾಜಾಜಿನಗರ):– ಮಾನ್ಯ ಅಧ್ಯಕ್ಷರೇ, ಬೆಂಗಳೂರು ಮಹಾನಗರ ಹಾಗೂ ಇತರ ಕಡೆ ರೆವಿನ್ಯೂ ನಿವೇಶನದಾರರ ಹತ್ತಿರ ಅಭಿವೃದ್ಧಿ ಶುಲ್ಕ ಪಾವತಿ ಮಾಡಲಿಕ್ಕೆ ಹಿಂದೆ ಚದುರ ಗಜ ಒಂದಕ್ಕೆ 200 ರೂ. ಗಳು ಇತ್ತು. ಅದನ್ನು ಜನರ ಅಭಿಪ್ರಾಯ ಪಡೆದು 100 ರೂ.ಗಳಿಗೆ ಇಳಿಸಿದ್ದರು. ಬೆಂಗಳೂರು ನಗರದಲ್ಲಿಯೇ ಸುಮಾರು ಒಂದು ಲಕ್ಷ ಜನರು ಈ ರೀತಿಯ ರೆವಿನ್ಯೂ ನಿವೇಶನದಾರರು ಇದ್ದಾರೆ. ಇದುವರೆವಿಗೂ 13-3-98ರ ಪ್ರಕಾರ ಸುಮಾರು 15 ಸಾವಿರ ಜನರು ಮಾತ್ರ ಬಂದು ಖಾತಾ ನೊಂದಣಿ ಮಾಡಿಕೊಂಡಿದ್ದಾರೆ. ಇದಕ್ಕೆ ಎರಡು ಕಾರಣಗಳಿವೆ. ನಗರ ಪಾಲಿಕೆಯಲ್ಲಿ ವ್ಯಾಪಾಕವಾಗಿರುವ ಭ್ರಷ್ಟಾಚಾರ. ಖಾತಾ ನೊಂದಾವಣಿಗೆ ಅಧಿಕೃತ ಶುಲ್ಕ 10 ಸಾವಿರ ರೂ. ಗಳು ಇದ್ದರೆ, ಅವರ ಹತ್ತಿರ ಕಾರ್ಪೊರೇಷನ್ನಿನವರು 15 ಸಾವಿರ ರೂ.ಗಳನ್ನು ಎಕ್ಸ್‌ಟ್ರಾ ತೆಗೆದುಕೊಳ್ಳುತ್ತಾ ಇದ್ದಾರೆ. ಅಂದರೆ ಕಾರ್ಪೊರೇಷನ್‌ಗೆ ಬರುವ ಆದಾಯಕ್ಕಿಂತ ಕಾರ್ಪೊರೇಷನ್‌ನ ಅಧಿಕಾರಿಗಳ ಆದಾಯ ಹೆಚ್ಚಿಗೆ ಇದೆ. ಜೊತೆಗೆ ಜನವರಿ ತಿಂಗಳಿಂದ ಮೊನ್ನೆಯವರೆಗೂ ಪಾರ್ಲಿಮೆಂಟ್ ಚುನಾವಣೆ

ಇದ್ದಕ್ಕೋಸ್ಕರವಾಗಿ ಇವರು ಪಾವತಿ ಮಾಡಲು ಹೋಗಿದ್ದರೂ ತೆಗೆದುಕೊಳ್ಳುವುದಕ್ಕೆ ಆಗಿಲ್ಲ. ಇವೊತ್ತು 31-3-98ನ್ನು ನೀವು ಕಟ್‌ಆಫ್‌ಡೇಟ್ ಎಂದು ಮಾಡಿದ್ದೀರಿ. ಅಲ್ಲಿಯವರೆಗೆ 100 ರೂ.ಗಳ ಅಭಿವೃದ್ಧಿ ಶುಲ್ಕವನ್ನು ತೆಗೆದುಕೊಳ್ಳುತ್ತೀರಿ, ಅದಾದ ಮೇಲೆ 200 ರೂ. ಗಳನ್ನು ಕಟ್ಟಬೇಕೆಂದು ಹೇಳುತ್ತಾ ಇದ್ದೀರಿ. ಇದರಿಂದಾಗಿ ಸುಮಾರು 80 ಸಾವಿರಗಳಷ್ಟು ರೆವಿನ್ಯೂ ನಿವೇಶನದಾರರಿಗೆ ತುಂಬಾ ತೊಂದರೆಯಾಗುತ್ತಾ ಇದೆ, ಒಂದನೇದಾಗಿ ನಗರಪಾಲಿಕೆಯಲ್ಲಿ ಈ ರೀತಿಯಾಗಿ ಅನಧಿಕೃತ ಹಣದ ಹಾವಳಿಯನ್ನು ನಿಲ್ಲಿಸಬೇಕು. ಎರಡನೇಯದಾಗಿ ಅವಧಿಯನ್ನು ಮುಂದುವರಿಸಬೇಕು ಮತ್ತು ಸರಳೀಕರಣ ಮಾಡಬೇಕು. ಅದಕ್ಕೋಸ್ಕರ ನಾನು ತಮ್ಮ ಮೂಲಕ ಕೇಳಿಕೊಳ್ಳುವುದೇನೆಂದರೆ 31-3-98 ಎಂದು ಏನು ನೀವು ದಿನಾಂಕ ನಿಗದಿ ಮಾಡಿದ್ದೀರಿ, ಅದನ್ನು ಇನ್ನೂ ಒಂದು ವರ್ಷ ಕಾಲ ಎಕ್ಸ್‌ಟೆಂಜ್ ಮಾಡಿ, ಚದರ ಗಜ ಒಂದಕ್ಕೆ 100 ರೂ.ಗಳ ಪ್ರಕಾರ ಖಾತಾ ನೊಂದಾವಣೆ ಮಾಡಲು ಅವಕಾಶ ಮಾಡಿಕೊಡಬೇಕು, ಜೊತೆಗೆ ಲಂಚದ ಹಾವಳಿ ನಿಲ್ಲಿಸಿ ಸರಳೀಕೃತ ಕ್ರಮವನ್ನು ಜಾರಿಗೆ ತರಬೇಕೆಂದು ತಮ್ಮಲ್ಲಿ ಕೇಳಿಕೊಳ್ಳುತ್ತೇನೆ.

+ ಶ್ರೀ ಹೆಚ್.ಎನ್. ಸಂಜೀಗೌಡ (ಬಸವನಗುಡಿ):- ಮಾನ್ಯ ಅಧ್ಯಕ್ಷರೇ, ಮಾನ್ಯ ದೇವೇಗೌಡರು ಮುಖ್ಯಮಂತ್ರಿಯವರಾಗಿದ್ದಂಥ ಕಾಲದಲ್ಲಿ ಎಲ್ಲೆಲ್ಲಿ ರೆವಿನ್ಯೂ ನಿವೇಶನದಾರರಿದ್ದಾರೆ, ಎಲ್ಲೆಲ್ಲಿ ಮನೆಕಟ್ಟಿಕೊಂಡು ಇದ್ದಾರೆ, ಆ ಏರಿಯಾದಲ್ಲಿ ಅಧಿಕಾರಿಗಳು ಹೋಗಿ ಶಿಬಿರ ಮಾಡಿ ಅವರ ಹತ್ತಿರ ಹಣವನ್ನು ತೆಗೆದುಕೊಂಡು ಖಾತಾವನ್ನು ಮಾಡಬೇಕೆಂದು ಆಗಿತ್ತು. ಈಗ ಖಾತೇ ಮಾಡಿಸಿಕೊಳ್ಳಲು ಹಣ ಕಟ್ಟಲು ಹೋದರೆ ಹಣ ತೆಗೆದುಕೊಳ್ಳುವುದಿಲ್ಲ. ಅದಕ್ಕೆ ಕಾರಣ ಗೊತ್ತಿಲ್ಲ ಈಗ ಶಿಬಿರ ಮಾಡಿ ಖಾತಾ ನೋಂದಾವಣೆ ಮಾಡಲು ನಿಮ್ಮ ಅಧಿಕಾರಿಗಳಿಗೆ ಹೇಳಬೇಕು. ಮತ್ತು ಇದಕ್ಕೆ ಕಾಲಮಿತಿ ಹಾಕುವುದು ಬೇಕಾಗಿಲ್ಲ. ನಿಮ್ಮ ಅಧಿಕಾರಿಗಳು ಎಷ್ಟು ಚುರುಕಾಗಿ ಈ ಕೆಲಸವನ್ನು ಮಾಡುತ್ತಾರೆ, ಅಷ್ಟು ಚುರುಕಾಗಿ ಈ ಕೆಲಸ ಆಗುತ್ತದೆ. ನಿಮ್ಮ ಅಧಿಕಾರಿಗಳು ಮನಸ್ಸು ಮಾಡಿದರೆ 6 ತಿಂಗಳಲ್ಲಿ ಮುಗಿಸಬಹುದು. ಅಲ್ಲಲ್ಲಿ ಶಿಬಿರ ಮಾಡಿ ಜನರು ದಣಿಯುವುದನ್ನು ತಪ್ಪಿಸಬೇಕು. ದಣಿದರೂ ನೀವು ಕೆಲಸ ಮಾಡಿಕೊಡುವ ಹಾಗೆ ಒಂದು ಒಳ್ಳೆಯ ವ್ಯವಸ್ಥೆಯನ್ನು ಮಾಡಿ.

ಶ್ರೀ ಅನಂತ್ ನಾಗ್ (ಬೆಂಗಳೂರು ನಗರಾಭಿವೃದ್ಧಿ ಸಚಿವರು):- ಮಾನ್ಯ ಸದಸ್ಯರು ಹೇಳಿದಂತಹ ವಿಚಾರಗಳು ನಮ್ಮ ಗಮನಕ್ಕೆ ಬಂದಿದೆ. ಇದು ನಡೆಯುತ್ತಿದೆ. ಆದ್ದರಿಂದ ನಾನು ಅಯುಕ್ತರಿಗೆ ತಿಳಿಸಿದ್ದೇನೆ. ಅನೇಕ ಕಡೆ ಹೇಳಿದ್ದೆವೆ. ಯಾರು ಎಷ್ಟು ಕೇಳುತ್ತಿದ್ದಾರೆ ಅವರ ಹೆಸರನ್ನು ಹೇಳಿದರೆ ಕಠಿಣ ಕ್ರಮ ತೆಗೆದುಕೊಳ್ಳುವುದಕ್ಕೆ ಅನುಕೂಲವಾಗುತ್ತದೆಂದು ಹೇಳಿದರೂ ಇಲ್ಲಿಯವರೆಗೆ ಅವರು ಹಿಂಜರಿಯುತ್ತಿದ್ದರು. ಅವರು ಇನ್ನು ಮುಂದೆ ಓರಲ್ ಆಗಿ ಹೇಳಿದರೂ ಸಾಕು ಅಂತಹ ಅಧಿಕಾರಿಗಳ ಮೇಲೆ ತೀವ್ರವಾದ ಕಠಿಣವಾದ ಕ್ರಮ ಕೈಗೊಳ್ಳುತ್ತೇವೆ ಎನ್ನುವುದನ್ನು ಈವತ್ತಿನಿಂದಲೇ ಪ್ರಾರಂಭ ಮಾಡುತ್ತಿದ್ದೇವೆ. ಅಭಿವೃದ್ಧಿ ಶುಲ್ಕದ ಅವಧಿಯನ್ನು 31-3-98 ಎಂದು ಮಾಡಿದ್ದು ಅದನ್ನು ಇನ್ನು 3 ತಿಂಗಳು ವಿಸ್ತರಿಸುವುದಕ್ಕೆ ಕೂಡ ಹೇಳಿದ್ದೇವೆ. 20 ಸಾವಿರ ಜನರು ಮಾತ್ರ ಖಾತೆದಾರರು ಕೊಟ್ಟಿದ್ದಾರೆ ಇನ್ನು 80 ಸಾವಿರ ಕೊಡಬೇಕಾಗಿದೆ ಎಂದು ತಾವು ಹೇಳಿದಿರಿ. ಸರಳೀಕರಣ ಮಾಡುವುದಕ್ಕೂ ನಾವು ಕ್ರಮ ಕೈಗೊಂಡಿದ್ದೇವೆ. ಮಾನ್ಯ ಹಿರಿಯ ಸದಸ್ಯರು ಹೇಳಿದ ಹಾಗೆ ಹಿಂದೆ ಕ್ಯಾಂಪ್‌ಗಳನ್ನು ಮಾಡಿದ್ದೆವು. ಆದರೆ ಕಾರಣಾಂತರಗಳಿಂದ ಮಾಡಿಲ್ಲ.